ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಗೋವಿಂದರಾಜು, ಇವರು ನಿಯಮ-330 ರಡಿ ಪ್ರಸ್ತಾಪಿಸಿರುವ ಸೂಚನೆಗೆ ಉತ್ತರಿಸುವ ಬಗ್ಗೆ:

**ಪ್ರಶ್ನೆ:**

ಕೋಲಾರ ಜಿಲ್ಲೆಯ ರೈತರು ತಮ್ಮ ಜೀವನೋಪಾಯಕ್ಕಾಗಿ ಕೃಷಿ, ತೋಟಗಾರಿಕೆ, ರೇಷ್ಮೆ, ಹೈನುಗಾರಿಕೆ ಹಾಗೂ ಕೋಳಿ ಸಾಕಾಣಿಕೆಯಲ್ಲಿ ತೊಡಗಿಸಿಕೊಂಡಿರುತ್ತಾರೆ. ಕೃಷಿಗೆ ಸಂಬಂಧಿಸಿದಂತೆ ದೊಡ್ಡ ಪ್ರಮಾಣದಲ್ಲಿ ಕೃಷಿ ಬೆಳೆಗಳಾದ ರಾಗಿ, ನೆಲಗಡಲೆ ಹಾಗೂ ಉಪ ಬೆಳೆಗಳಾದ ತೊಗರಿ ಹಾಗೂ ಅವರೆಕಾಳು ಮಾತ್ರ ಬೆಳೆಯುತ್ತಿದ್ದು, ತೋಟಗಾರಿಕೆ ಬೆಳೆಗಳಾದ ತರಕಾರಿ, ಹಣ್ಣು ಹಾಗೂ ಹೂಗಳನ್ನು ಹೆಚ್ಚಿನ ಜಮೀನಿನಲ್ಲಿ ರೈತರು ಬೆಳೆಯುತ್ತಿದ್ದಾರೆ. ಆದರೆ ಅನುದಾನ ಹಂಚಿಕೆಯಲ್ಲಿ ಸರ್ಕಾರ ತೋಟಗಾರಿಕೆ ಇಲಾಖೆಗೆ ಬಹಳ ಕಡಿಮೆ ಅನುದಾನ ಒದಗಿಸುತ್ತಿದ್ದಾರೆ. ಬಹಳ ಮುಖ್ಯವಾಗಿ ರೈತರಿಗೆ ಬೇಕಾದಂತ ತಾಂತ್ರಿಕತೆ, ಬೆಳೆಗೆ ತಗುಲುವ ರೋಗಗಳ ಪತ್ತೆಗೆ ಸರ್ಕಾರದಿಂದ ಸರಿಯಾದ ಮಾರ್ಗದರ್ಶನ, ಯಾವ ಯಾವ ಸಂದರ್ಭದಲ್ಲಿ ಯಾವ ಬೆಳೆಗಳನ್ನು ಬೆಳೆಯಬೇಕೆಂಬ ಅರಿವು ಮೂಡಿಸುವುದು, ಹಾಗೂ ಉತ್ತಮ ತಾಂತ್ರಿಕತೆ, ಮಣ್ಣಿನ ಗುಣಮಟ್ಟದ ಸಂಶೋಧನೆ ಆಗಬೇಕಾಗಿರುವುದು, ರೈತರ ಹಿತದೃಷ್ಟಿಯಿಂದ ಈ ವಿಷಯವನ್ನು ನಿಯಮ 330 ರಡಿಯಲ್ಲಿ ಪ್ರಸ್ತಾಪಿಸಿರುವ ಬಗ್ಗೆ.

**ಉತ್ತರ:**

ಕೋಲಾರ ಜಿಲ್ಲೆಯ ಭೌಗೋಳಿಕ ಕ್ಷೇತ್ರ 3.74 ಲಕ್ಷ ಹೆಕ್ಟೇರ್ ಪ್ರದೇಶ ಹೊಂದಿದ್ದು, ಇದರಲ್ಲಿ 2.39 ಲಕ್ಷ ಹೆಕ್ಟೇರ್ ಪ್ರದೇಶವು ಸಾಗುವಳಿಗಾಗಿ ಬಳಕೆಯಾಗುತ್ತಿದೆ. ಪ್ರಸ್ತುತ ಅಂದಾಜು 1.007 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ತೋಟಗಾರಿಕೆ ಬೆಳೆಗಳನ್ನು ಬೆಳೆಯಲಾಗುತ್ತಿದೆ.

1. ಕೋಲಾರ ಜಿಲ್ಲೆಯಲ್ಲಿ ಕಳೆದ 5 ವರ್ಷಗಳಲ್ಲಿ ಕೇಂದ್ರ ಪುರಸ್ಕೃತ ಯೋಜನೆ, ರಾಜ್ಯ ವಲಯ ಯೋಜನೆ ಹಾಗೂ ಜಿಲ್ಲಾವಲಯ ಯೋಜನೆಗಳಡಿ ಬಿಡುಗಡೆಯಾಗಿರುವ ಅನುದಾನ ಹಾಗೂ ವೆಚ್ಚದ ವಿವರ ಈ ಕೆಳಗಿನಂತಿದೆ.

(ರೂ. ಲಕ್ಷಗಳಲ್ಲಿ)

| ವರ್ಷ | ಬಿಡುಗಡೆ | ವೆಚ್ಚ |
|---|---|---|
| 2017-18 | 3816.00 | 3797.32 |
| 2018-19 | 4738.80 | 4500.20 |
| 2019-20 | 3679.69 | 3657.53 |
| 2020-21 | 3207.92 | 2909.79 |
| 2021-22 | 2623.33 | 2022.91 |
| ಒಟ್ಟು | **19426.56** | **19103.61** |

ಯೋಜನಾವಾರು ಬಿಡುಗಡೆಯಾದ ಮತ್ತು ವೆಚ್ಚದ ವಿವರವನ್ನು ಅನುಬಂಧ-01 ರಲ್ಲಿ ಲಗತ್ತಿಸಿದೆ.

2. ಕೋಲಾರ ಜಿಲ್ಲೆಯಲ್ಲಿ ಹೆಚ್ಚಾಗಿ ಬೆಳೆಯುವ ಟೊಮ್ಯಾಟೊ, ಮಾವು, ಕ್ಯಾಪ್ಸಿಕಂ, ಆಲೂಗಡ್ಡೆ ಬೆಳೆಗಳಲ್ಲಿ ತಗಲುವ ಕೀಟ ಹಾಗೂ ರೋಗ ಭಾದೆಗಳಿಗೆ ಜಿಲ್ಲೆಯಲ್ಲಿ ಇರುವ ಕೃಷಿ ವಿಜ್ಞಾನ ಕೇಂದ್ರದ ವಿಜ್ಞಾನಿಗಳ ಸಹಯೊಗದೊಂದಿಗೆ ತಾಕುಗಳಿಗೆ ಭೇಟಿ ನೀಡಿ ರೈತರಿಗೆ ತಾಂತ್ರಿಕ ಸಲಹೆಗಳನ್ನು ನೀಡಲಾಗುತ್ತಿದೆ ಹಾಗೂ ಕ್ಷೇತ್ರ ಮಟ್ಟದ ಸಹಾಯಕ ತೋಟಗಾರಿಕೆ ಅಧಿಕಾರಿಗಳು ಕ್ಷೇತ್ರಗಳಿಗೆ ಭೇಟಿ ನೀಡಿ ಸೂಕ್ತ ತಾಂತ್ರಿಕ ಸಲಹೆಗಳನ್ನು ನೀಡುವುದರ ಜೊತೆಗೆ ಇಲಾಖೆಯ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ.
3. ಕೋಲಾರ ಜಿಲ್ಲೆಯ, ಕೃಷಿ ವಿಜ್ಞಾನ ಕೇಂದ್ರ, ಟಮಕದಲ್ಲಿ (ತೋಟಗಾರಿಕೆ ಮಹಾವಿದ್ಯಾಲಯ ಆವರಣ) ಮಣ್ಣು ಮತ್ತು ನೀರು ಮಾದರಿ ಪರೀಕ್ಷೆ ಕೇಂದ್ರ ಹಾಗೂ ಕೃಷಿ ವಿಶ್ವವಿದ್ಯಾಲಯ, ಚಿಂತಾಮಣಿಯಲ್ಲಿ ಮಣ್ಣು ಮಾದರಿ ಪರೀಕ್ಷೆ ಕೇಂದ್ರಗಳಲ್ಲಿ ಮಾದರಿಗಳನ್ನು ಪರೀಕ್ಷಿಸಿ ರೈತರಿಗೆ ತಿಳುವಳಿಕೆ ಹಾಗೂ ಶಿಫಾರಸ್ಸುಗಳನ್ನು ನೀಡಲಾಗುತ್ತಿದೆ.
4. ತೋಟಗಾರಿಕೆ ವಿಶ್ವವಿದ್ಯಾಲಯ ಬಾಗಲಕೋಟೆಯ ಅಂಗ ಸಂಸ್ಥೆಗಳಾದ ತೋಟಗಾರಿಕೆ ಮಹಾವಿದ್ಯಾಲಯ ಕೋಲಾರ, ತೋಟಗಾರಿಕೆ ಸಂಶೋಧನಾ ಕೇಂದ್ರ ಹೊಗಳಗೆರೆ ಹಾಗೂ ಕೃಷಿ ವಿಜ್ಞಾನ ಕೇಂದ್ರ ಕೋಲಾರ ಮತ್ತು ತೋಟಗಾರಿಕೆ ಇಲಾಖೆಯ ಸಹಯೋಗದೊಂದಿಗೆ ರೈತರಿಗೆ ತರಬೇತಿ, ಕ್ಷೇತ್ರೋತ್ಸವ ಮತ್ತು ವಿಚಾರ ಸಂಕೀರ್ಣಗಳನ್ನು ಆಯೋಜಿಸಿ ಉತ್ಪಾದನೆ ಮತ್ತು ಗುಣಮಟ್ಟದ ಉತ್ಪನ್ನವನ್ನು ಹೆಚ್ಚಿಸಲು ಇತ್ತೀಚಿನ ವರ್ಷಗಳಲ್ಲಿ 4290 ರೈತರಿಗೆ ತಾಂತ್ರಿಕ ಮಾಹಿತಿ ನೀಡಲಾಗಿದ್ದು ಪ್ರಸ್ತುತವು ಕೂಡ ತರಬೇತಿಯನ್ನು ಮುಂದುವರೆಸಲಾಗುತ್ತಿದೆ.
5. ತೋಟಗಾರಿಕೆ ಬೆಳೆಯಲ್ಲಿ ನೂತನ ತಳಿಗಳ ಪರಿಚಯಪಡಿಸುವಲ್ಲಿ ತೋಟಗಾರಿಕೆ ವಿಶ್ವವಿದ್ಯಾಲಯ ಕಾರ್ಯನಿರ್ವಹಿಸುತ್ತಿದೆ.
6. ಪ್ರಮುಖವಾಗಿ**ಟೊಮ್ಯಾಟೊ**: ಕೃಷ್ಣಪ್ರಭ ಶಾಲ್ಮಲಾ, ಕೃಷ್ಣಪ್ರಭ ತುಂಗ ಹಾಗೂ ಕೃಷ್ಣ ಪ್ರಭಬಾರಿ ಎಂಬ ಮೂರು ತಳಿಗಳು. **ಮಾವು:**ಮಲ್ಲಿಕ, ಬಾದಾಮಿ, ಬೆಂಗಳೂರಾ ತಳಿಗಳನ್ನು ಪರಿಚಯಿಸಿ ಅಭಿವೃದ್ಧಿಪಡಿಸಲಾಗುತ್ತಿದೆ. **ಗೊಡಂಬಿ:**ಚಿಂತಾಮಣಿ -1, 2 ಮತ್ತು 3 ತಳಿಯ ಪರಿಚಯ ಮತ್ತು ಸದರಿ ಬೆಳೆಯ ತಾಂತ್ರಿಕ ತರಬೇತಿಯನ್ನು ಕೈಗೊಳ್ಳಲಾಗುತ್ತಿದೆ.
7. ಒಂದು ಜಿಲ್ಲೆ ಒಂದು ಉತ್ಪನ್ನ ಕಾರ್ಯಕ್ರಮದಡಿ ಕೋಲಾರ ಜಿಲ್ಲೆಯ ಪ್ರಮುಖ ತರಕಾರಿ ಬೆಳೆಯಾದ ಟೊಮ್ಯಾಟೊ ಬೆಳೆಗೆ ಸೂಕ್ತ ಸಂಸ್ಕರಣೆಗಾಗಿ **ರೂ.** 3.50 ಕೋಟಿ ವೆಚ್ಚದಲ್ಲಿ ಸಂಸ್ಕರಣಾ ಕೇಂದ್ರವನ್ನು ಸ್ಥಾಪನೆ ಮಾಡಲಾಗುತ್ತಿದೆ.
8. ತೋಟಗಾರಿಕೆ ಉತ್ಪನ್ನಗಳ ಸಂರಕ್ಷಣೆಗಾಗಿ ಕೋಲಾರ ಜಿಲ್ಲೆಯ ಮಾಲೂರು ತಾಲ್ಲೂಕಿನಲ್ಲಿ RIDF ಯೋಜನೆಯಡಿ 2000 ಮೆ.ಟನ್ ಸಾಮರ್ಥ್ಯದ ಶೀಥಲ ಗೃಹ ನಿರ್ಮಾಣಕ್ಕೆ ಮಂಜೂರಾತಿ ದೊರೆತಿರುತ್ತದೆ.

9. ತೋಟಗಾರಿಕೆ ಇಲಾಖೆ ಅಂಗ ಸಂಸ್ಥೆಯಾದ ಮಾವು ಅಭಿವೃದ್ಧಿ ಮಂಡಳಿ ಹೊಗಳಗೆರೆ, ಶ್ರೀನಿವಾಸಪುರ ಹಾಗೂ ಮಾವು ಉತ್ಕೃಷ್ಟ ಕೇಂದ್ರ ಹೊಗಳಗೆರೆ ಶ್ರೀನಿವಾಸಪುರ ರವರಿಂದ ಮಾವು ಬೆಳೆಯ ಬಗ್ಗೆ ಕಾಲಕಾಲಕ್ಕೆ ಬರುವ ರೋಗ ಮತ್ತು ಕೀಟಭಾಧೆಗಳ ನಿಯಂತ್ರಣಕ್ಕೆ ಕರಪತ್ರಗಳು, ಬಿತ್ತಿಪತ್ರ ಹಾಗೂ ತರಬೇತಿಗಳ ಮೂಲಕ ರೈತರಿಗೆ ತಾಂತ್ರಿಕ ಮಾಹಿತಿಯನ್ನು ನೀಡಲಾಗುತ್ತಿದೆ.

10. ರೋಗ / ಕೀಟಗಳ ಬಾಧೆಯಿಂದ ಹಾನಿಗೊಳಗಾದ ರೈತರಿಗೆ ಇಲಾಖಾವತಿಯಿಂದ ಜಿಲ್ಲಾವಲಯ "ರೈತರಿಗೆ ಸಹಾಯ" ಯೋಜನೆಯಲ್ಲಿ ಸಸ್ಯಸಂರಕ್ಷಣಾ ಔಷದಿ ಖರೀದಿಗೆ ಶೇ. 50% ರಷ್ಟು ಸಹಾಯಧನವನ್ನು ನೀಡಲಾಗುತ್ತಿದೆ. ರಾಜ್ಯವಲಯ "ತೋಟಗಾರಿಕೆ ಬೆಳೆಗಳ ಕೀಟ & ರೋಗಗಳ ಸಮಗ್ರ ನಿಯಂತ್ರಣ" ಯೋಜನೆಯಲ್ಲಿ ಸಸ್ಯ ಸಂರಕ್ಷಣಾ ಔಷದಿ ಖರೀದಿಗೆ ಶೇ.75% ರಷ್ಟು ಸಾಮಾನ್ಯ ವರ್ಗದವರಿಗೆ ಹಾಗೂ ಶೇ.90% ರಷ್ಟು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ವರ್ಗದವರಿಗೆ ಸಹಾಯ ಧನವನ್ನು ನೀಡಲಾಗುತ್ತಿದೆ. ಸದರಿ ಯೋಜನೆಯಡಿ ಕಳೆದ 5 ವರ್ಷಗಳಲ್ಲಿ ಒಟ್ಟು ರೂ.221.64 ಲಕ್ಷಗಳ ಸಹಾಯಧನವನ್ನು ನೀಡಲಾಗಿದೆ.

11. ತೆಂಗಿನ ಬೆಳೆಯಲ್ಲಿ ಕಂಡುಬರುವ ಕಪ್ಪು ತಲೆಹುಳುವಿನ ನಿಯಂತ್ರಣಕ್ಕಾಗಿ ಜಿಲ್ಲೆಯ ಇಲಾಖಾ ಪ್ರಯೋಗ ಶಾಲೆಯಲ್ಲಿ 25.21 ಲಕ್ಷಗಳ ಪರೋಪ ಜೀವಿಗಳನ್ನು ಉತ್ಪಾದಿಸಿ 636 ರೈತರಿಗೆ ಉಚಿತವಾಗಿ ವಿತರಿಸಲಾಗಿದೆ.

12. ತೋಟಗಾರಿಕೆ ಬೆಳೆಗಳ ಮಾರುಕಟ್ಟೆಗಾಗಿ ಇಲಾಖೆಯ ಕಾರ್ಯಕ್ರಮಗಳಡಿ 8 ರೈತ ಉತ್ಪಾದಕ ಸಂಸ್ಥೆಗಳಿಗೆ ಮಾರುಕಟ್ಟೆ ಸ್ಥಾಪನೆಗೆ ಸರ್ಕಾರದಿಂದ ಸಹಾಯ ಕಲ್ಪಿಸಲಾಗಿದೆ.

13. ಇಲಾಖೆಯ ವಿಸ್ತರಣಾ ಚಟುವಟಿಕೆಗಳ ಮೂಲಕ ರೈತರಿಗೆ ಅಗತ್ಯ ತಾಂತ್ರಿಕ ನೆರವು, ಬೆಳೆ ಬೇಸಾಯ ಕ್ರಮಗಳ ಬಗ್ಗೆ, ಮಣ್ಣಿನ ಗುಣಮಟ್ಟ ಪರಿಶೀಲನೆಗೆ ಸೂಕ್ತ ಮಾಹಿತಿ ನೀಡಿ ಮಾರ್ಗದರ್ಶನ ನೀಡಲಾಗುತ್ತಿದೆ

**HORTI 610 HGM 2022**

(ಮುನಿರತ್ನ)

**ತೋಟಗಾರಿಕೆ ಹಾಗೂ ಯೋಜನೆ, ಕಾರ್ಯಕ್ರಮ**
**ಸಂಯೋಜನೆ ಮತ್ತು ಸಾಂಖ್ಯಿಕ ಸಚಿವರು**